ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

**ಸಿ.ಸಿ.ನಂಃ1294/25**

ಪಿಡಬ್ಲ್ಯುಃ – 1

ಸಿಡಬ್ಲ್ಯುಃ – 1

ದಿನಾಂಕಃ 27.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಗಣೇಶ |
| ತಂದೆಯ ಹೆಸರು | – ಚೆನಿಯಾ |
| ವಯಸ್ಸು | – 55 ವರ್ಷ |
| ವೃತ್ತಿ | – ಕೂಲಿ ಕೆಲಸ |
| ವಾಸಸ್ಥಳ | – ಹೂಕಾಡು ಪೈಸಾರಿ, ಕಗ್ಗೋಡ್ಲು ಗ್ರಾಮ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ಚಾಸಾ–2 ನನ್ನ ಮಗಳು. ಮೃತ ಜಯಕುಮಾರ್ ನನ್ನ ಅಳಿಯ. ಚಾಸಾ–3 ನನಗೆ ಗೊತ್ತು. ಆರೋಪಿ ನನಗೆ ಗೊತ್ತು. ನನ್ನ ಅಳಿಯ ಜಯಕುಮಾರ್ ಮೆಕಾನಿಕ್ ಕೆಲಸ ಮಾಡುತ್ತಿದ್ದ. ಆರೋಪಿ ಮೃತ ಜಯಕುಮಾರ್ ಗೆ ಮರ ಕುಯ್ಯುವ ಮೆಷಿನ್ ಅನ್ನು ರಿಪೇರಿ ಮಾಡಲು ಕೊಟ್ಟಿದ್ದ. ದಿಃ 28.07.2024 ರಂದು ರಾತ್ರಿ 10.00 ಗಂಟೆ ಸಮಯದಲ್ಲಿ ಚಾಸಾ–2 ರವರು ನನಗೆ ಫೋನ್ ಮಾಡಿ ಆರೋಪಿ ಬಂದು ಜಯಕುಮಾರ್ ಮತ್ತು ಚಾಸಾ–2 ರವರ ಮನೆಯ ಹತ್ತಿರ ಗಲಾಟೆ ಮಾಡುತ್ತಿದ್ದಾನೆ ಎಂದು ತಿಳಿಸಿದರು. ಆರೋಪಿ ತಾನು ಕೊಟ್ಟಿದ್ದ ಮೆಷಿನ್ ಬೇಕು ಎಂದು ಗಲಾಟೆ ಮಾಡಿದ್ದು, ಅದಕ್ಕೆ ಜಯಕುಮಾರ್ ರವರು ಇನ್ನೂ ರಿಪೇರಿ ಆಗಿಲ್ಲ ಎಂದು ಹೇಳಿದರೂ ಕೂಡ ಆರೋಪಿ ಗಲಾಟೆ ಮಾಡಿ, ಜಯಕುಮಾರ್ ರವರಿಗೆ ಆರೋಪಿ ತನ್ನ ಕೈಯಿಂದ ಎಡ ಭುಜಕ್ಕೆ, ಎಡ ಪಕ್ಕೆ ಮತ್ತು ಎಡಗೈಗೆ ಹೊಡೆದು, ಜಯಕುಮಾರ್ ಅವರನ್ನು ಆರೋಪಿ ಚರಂಡಿಗೆ ಹಾಕಿದ್ದಾಗಿ ಎಂದು ಚಾಸಾ–2 ನನಗೆ ತಿಳಿಸಿದರು. ಆಗ ನಾನು ಚಾಸಾ–2 ರವರ ಮನೆಗೆ ಹೋಗಿ ನೋಡಿದಾಗ ಜಯಕುಮಾರ್ ಚರಂಡಿಯಲ್ಲಿ ಬಿದ್ದಿದ್ದ. ನಾನು ಜಯಕುಮಾರ್ ನನ್ನು ಎತ್ತಿ ಮನೆಯಲ್ಲಿ ಬಿಟ್ಟು ನಾನು ನನ್ನ ಮನೆಗೆ ವಾಪಾಸ್ಸು ಬಂದೆ. ಮಾರನೆ ದಿನ ಚಾಸಾ–2 ರವರ ಮನೆಗೆ ನಾನು

ಹೋಗಿ ಜಯಕುಮಾರ್ ಗೆ ಚಿಕಿತ್ಸೆ ಪಡೆದುಕೊಳ್ಳುವಂತೆ ಹೇಳಿದೆ. ಚಾಸಾ–2ರವರು ಜಯಕುಮಾರ್ ಅವರನ್ನು ಉಪಚರಿಸಿರುತ್ತಾರೆ. ಘಟನೆಯಾದ ಮೂರು ದಿನಗಳ ನಂತರ ಜಯಕುಮಾರ್ ರವರು ಟ್ರೇನಿಂಗ್ ಗೆಂದು ಬೆಂಗಳೂರಿಗೆ ಹೋಗಿದ್ದರು.ಬೆಂಗಳೂರಿನಿಂದ ಶನಿವಾರ ರಾತ್ರಿ ವಾಪಾಸ್ಸು ಬರುವಾಗ, ಭಾನುವಾರ ಬೆಳಿಗ್ಗೆ ಜಯಕುಮಾರ್ ರವರಿಗೆ ಸೀರಿಯಸ್ ಆಗಿದೆ ಎಂದು ಹೇಳಿ ಚಾಸಾ–3 ರವರು ಮಡಿಕೇರಿಯ ಸರ್ಕಾರಿ ಜಿಲ್ಲಾ ಆಸ್ಪತ್ರೆಗೆ ಸೇರಿಸಿದ್ದರು. ಅಲ್ಲಿನ ವೈದ್ಯರು ಪರೀಕ್ಷೆ ಮಾಡಿ ಇಲ್ಲಿ ಆಗುವುದಿಲ್ಲ ಎಂದು ಹೇಳಿದ ಮೇರೆಗೆ ಜಯಕುಮಾರ್ ರವರನ್ನು ಚಾಸಾ–2 ಮತ್ತು ನನ್ನ ಮಗ ಮಂಗಳೂರು ಆಸ್ಪತ್ರೆಗೆ ಚಿಕಿತ್ಸೆಗೆಂದು ಕರೆದುಕೊಂಡು ಹೋಗಿರುತ್ತಾರೆ. ಅದೇ ದಿನ ರಾತ್ರಿ 11.50 ಕ್ಕೆ ಚಿಕಿತ್ಸೆ ಫಲಕಾರಿಯಾಗದೆ ಜಯಕುಮಾರ್ ಮೃತಪಟ್ಟಿರುತ್ತಾರೆ. ಭಾನುವಾರದ ದಿನ ನಾನು ಆರೋಪಿಯ ವಿರುದ್ಧ ಪೊಲೀಸರಿಗೆ ದೂರು ನೀಡಿರುತ್ತೇನೆ.

ಸದರಿ ದೂರನ್ನು ಸಾಕ್ಷಿ ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–1 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಜಯಕುಮಾರ್ ರವರಿಗೆ ಆರೋಪಿ ತನ್ನ ಕೈಯಿಂದ ಹಲ್ಲೆ ಮಾಡಿದ್ದ ಅದರಿಂದ ಆದ ಗಾಯಗಳಿಂದ ಅವರು ಮೃತ ಪಟ್ಟಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ – ಆರೋಪಿ ಪರ ವಕೀಲರಾದ ಶ್ರೀ. ಪಿ. ಪಿ. ರವರಿಂದಃ–

ಘಟನೆಯನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ನಿಪಿ–1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಚಾಸಾ–2 ರವರು ನನಗೆ ಆರೋಪಿ ಜಯಕುಮಾರ್ ರವರಿಗೆ ಹಲ್ಲೆ ಮಾಡಿದ ವಿಚಾರ ಹೇಳಿದ ಮೇರೆಗೆ ನಾನು ಆರೋಪಿಯ ವಿರುದ್ಧ ನಿಪಿ–1 ರಂತೆ ದೂರು ನೀಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರುತ್ತದೆ. ನಾನು ಹೇಳಿದ ಮೇರೆಗೆ ನನ್ನ ಮಗ ನಿಪಿ–1 ದೂರನ್ನು ಬರೆದಿರುತ್ತಾನೆ. ನಿಪಿ–1 ರಲ್ಲಿ ನಾನು ಹೇಪಳಿರುವಂತೆ ಆರೋಪಿ ಜಯಕುಮಾರ್ ರವರಿಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ–2 ರವರು ಹೇಳಿರುವ ತಪ್ಪು ಮಾಹಿತಿಯ ಮೇರೆಗೆ ನಾನು ಆರೋಪಿಯ ವಿರುದ್ಧ ಸುಳ್ಳು ನಿಪಿ–1 ದುಾರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು, ಚಾಸಾ–2, ಆರೋಪಿ ಮತ್ತು ನನ್ನ ಮಗ ನಾವೆಲ್ಲರೂ ಹೂಕಾಡು ಪೈಸಾರಿ ಗ್ರಾಮದಲ್ಲಿ ಕೂಲಿ ಕೆಲಸ ಮಾಡುತ್ತೇವೆ ಎಂದರೆ ಸರಿ. ನನಗೆ, ಚಾಸಾ–2 ರವರಿಗೆ, ಆರೋಪಿಗೆ, ಎಲ್ಲರಿಗೂ ಮದ್ಯಪಾನ ಮಾಡುವ ಅಭ್ಯಾಸ ಇದೆ ಎಂದರೆ ಸರಿಯಲ್ಲ. ಚಾಸಾ–2 ಮತ್ತು ಜಯಕುಮಾರ್ ರವರಿಗೆ ಆಗಾಗ ಜಗಳ ಆಗುತ್ತಿತ್ತು ಎಂದರೆ ಸರಿಯಲ್ಲ. ಚಾಸಾ–2 ರವರ ಮನೆಯ ಪಕ್ಕ ಶಂಕರ್ ಎನ್ನುವವರ ಅಂಗಡಿ, ಚಾಸಾ–9 ರವರ ಮನೆ ಇದೆ ಎಂದರೆ ಸರಿ. ಚಾಸಾ–2 ರವರ ಮನೆಯ ಪಕ್ಕ, ಚಂಗಪ್ಪ, ಮಂಜು, ಡಿಂಗಯ್ಯ ಇವರ ವಾಸದ ಮನೆಗಳು ಇವೆ ಎಂದರೆ ಸರಿ. ನನ್ನ ಮನೆಯಿಂದ ಚಾಸಾ–2 ರವರ ಮನೆಗೆ ಅಂದಾಜು ½ ಕಿ ಮೀ ಆಗುತ್ತದೆ. ನಾನು ಚಾಸಾ–2 ರವರ ಮನೆಗೆ ಹೋದಾಗ ಅವರ ಮನೆಯ ಮೇಲೆ ಹೇಳಿದ ಅಕ್ಕಪಕ್ಕದವರು ಯಾರೂ ಇರಲಿಲ್ಲ. ರಾತ್ರಿ 9.30 ಗಂಟೆಗೆ ಚಾಸಾ–2 ರವರು ನನಗೆ ಫೋನ್ ಮಾಡಿ ವಿಷಯ ತಿಳಿಸಿದರು. ಆಗ ನಾನು ಒಬ್ಬನೇ ಚಾಸಾ–2 ರವರ ಮನೆಗೆ ರಾತ್ರಿ 10.00 ಗಂಟೆ ಸುಮಾರಿಗೆ ಹೋದೆ. ನಾನು ನೋಡಿದಾಗ ಜಯಕುಮಾರ್ ರವರ ಎಡಗೈಗೆ ಗಾಯ ಆಗಿ ರಕ್ತ ಬರುತ್ತಿತ್ತು. ಜಯಕುಮಾರ್ ತೊಟ್ಟಿದ್ದ ಶರ್ಟಿಗೆ ರಕ್ತದ ಕಲೆ ಆಗಿತ್ತು. ರಾತ್ರಿ ಆಗಿದ್ದರಿಂದ ಅದೇ ದಿನ ಜಯಕುಮಾರ್ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಆಗಿರಲಿಲ್ಲ. ಮಾರನೆ ದಿನ ನನಗೆ ಆಗುವುದಿಲ್ಲ, ನಾನು ಕೂಲಿ ಕೆಲಸಕ್ಕೆ ಹೋಗಬೇಕು ಅದಕ್ಕೆ ನೀನು ಆಸ್ಪತ್ರೆಗೆ ಕರೆದುಕೊಂಡು ಹೋಗು ಎಂದು ಚಾಸಾ–2 ರವರಿಗೆ ಹೇಳಿದ್ದೆ. ಮಾರನೆ ದಿನ ನಾನು ಚಾಸಾ–2 ರವರ ಮನೆಗೆ ಹೋಗಿ ಏಕೆ ಆಸ್ಪತ್ರೆಗೆ ಹೋಗಿಲ್ಲ ಎಂದು ಚಾಸಾ–2 ಮತ್ತು ಜಯಕುಮಾರ್ ರವರನ್ನು ಕೇಳಿದಾಗ ಅವರುಗಳು ಬೇರೆ ಕಡೆಯಿಂದ ಮದ್ದು ತಂದಿದ್ದೇವೆ , ಅದಕ್ಕೆ ಹೋಗಿಲ್ಲ ಎಂದು ತಿಳಿಸಿರುತ್ತಾರೆ. ಮಾರನೆ ದಿನ ನಾನು ಹೋಗಿ ನೋಡಿದಾಗ ಜಯಕುಮಾರ್ ರವರ ಮುಖ ಮತ್ತು ಮೈ , ಕೈ ಊದಿಕೊಂಡಿತ್ತು. ಅದೇ ದಿನ ದೂರು ಕೊಡಲು ತೊಂದರೆ ಇತ್ತಾ ಎಂದರೆ ಏನೂ ಇಲ್ಲ ಎನ್ನುತ್ತಾರೆ.

ಚಾಸಾ–2 ನನಗೆ ಫೋನ್ ಮಾಡಿಲ್ಲ, ನಾನು ಚಾಸಾ–2 ರವರ ಮನೆಗೆ ಹೋಗಿಲ್ಲ, ಅಲ್ಲಿ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಗಲಾಟೆ ಆಗಿಲ್ಲ, ಜಯಕುಮಾರ್ ರವರು ಚರಂಡಿಯಲ್ಲಿ ಬಿದ್ದಿರಲಿಲ್ಲ, ನಾನು ಆರೋಪಿಯ ವಿರುದ್ಧ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಘಟನಾ ದಿನದಂದು ಚಾಸಾ–2 ರವರ ಮನೆಯ ಬಳಿ ಹೋಗಿಲ್ಲ, ಚಾಸಾ–2 ಮತ್ತು ಜಯಕುಮಾರ್ ರವರು ಮದ್ಯಪಾನ ಮಾಡಿ ಗಲಾಟೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಘಟನೆಯಾದ ನಂತರ ಮೂರು ದಿನ ಜಯಕುಮಾರ್ ಕೆಲಸಕ್ಕೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಘಟನೆಯಾದ ಮೇಲೆ ಜಯಕುಮಾರ್ 3 ದಿನ ಮನೆಯಲ್ಲೇ ಇದ್ದರು ಎನ್ನುತ್ತಾರೆ. ಜಯಕುಮಾರ್ ಮೃತ ಪಡಲು ಮತ್ತು ಈ ಘಟನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ

ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ಹೊಡೆದಿದ್ದರಿಂದಲೇ ಜಯಕುಮಾರ್ ಮೃತ ಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲದಿದ್ದರೂ ನಾನು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–***

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ. ಎಂ. ಎಫ್. ಸಿ, ಮಡಿಕೇರಿ.